# ಹೊಲೆಯ ಹೊರಗಿಹನೆ ಊರೊಳಗಿಲ್ಲವೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 628.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 108.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 59.
4. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 246.
5. **Note:** Singer has followed Lyrics given without highlights are as per Ref. 1. The wordings in Ref. 2 are same as in Ref. 1. The wordings in Ref. 3 are different and are given separately in green highlights. The wordings in Ref. 4 are same as in Ref. 3.
6. **Note:** Singer has followed these lyrics.

ರಾಗ: ಮುಖಾರಿ ತಾಳ: ರೂಪಕ

ಹೊಲೆಯ ಹೊರಗಿಹನೆ ಊರೊಳಗಿಲ್ಲವೆ
ಶ್ರೀಹರಿಯ ಸ್ಮರಣೆಯನು ಬಲ್ಲವರು ಪೇಳಿ ‖ ಪ ‖

ಶೀಲವನು ಕೈಗೊಂಡು ನಡೆಸದಾತನೆ ಹೊಲೆಯ
ಪೇಳಿದ ಹರಿಕಥೆಯ ಕೇಳದವ ಹೊಲೆಯ
ಆಳಾಗಿ ಅರಸಂಗೆ ಕೇಡು ಬಗೆವವ ಹೊಲೆಯ
ಸೂಳೆಯನು ಕಾಮಿಸುವ ಶುದ್ಧ ಹೊಲೆಯ ‖ ೧ ‖

ಕೊಂಡ ಸಾಲುಗಳನ್ನು ತಿದ್ದದಾತನೆ ಹೊಲೆಯ
ಲಂಡತನದಲಿ ನಡೆವ ಭಂಡ ಹೊಲೆಯ
ಉಂಡ ಮನೆಗೆರಡನ್ನು ಬಗೆವಾತನೇ ಹೊಲೆಯ
ಹೆಂಡತಿಯ ಇಚ್ಛೆಯವ ಹೇಡಿ ಹೊಲೆಯ ‖ ೨ ‖

ಇದ್ದಾಗ ದಾನಧರ್ಮವ ಮಾಡದವ ಹೊಲೆಯ
ಮದ್ದಿಕ್ಕಿ ಕೊಲ್ಲುವವ ಮಾರಿ ಹೊಲೆಯ
ಬದ್ಧವಾದ ನಯ ನುಡಿ ಇಲ್ಲದಾತನೆ ಹೊಲೆಯ
ಶುದ್ದ ತಾನೆಂಬಾತ ಶುಂಠ ಹೊಲೆಯ ‖ ೩ ‖

ಆಸೆ ಮಾತನು ಕೊಟ್ಟು ಭಾಷೆ ತಪ್ಪುವ ಹೊಲೆಯ
ಲೇಸು ಉಪಕಾರಗಳ ಮಾಡದವ ಹೊಲೆಯ
ಮೋಸದಲಿ ಜೀವನವ ಮುನಿದು ಕೆಡಸುವ ಹೊಲೆಯ
ಹುಸಿಯ ಬೊಗಳುವನೊಬ್ಬ ಹುಚ್ಚ ಹೊಲೆಯ ‖ ೪ ‖

ಅರಿತು ಆಚಾರವನು ನಡೆಸದಾತನೆ ಹೊಲೆಯ
ಪರಸತಿಗೆ ಅಳುಕಿದವ ಪಾಪಿ ಹೊಲೆಯ
ಗುರುಹಿರಿಯರನು ನಮಿಸದಾತನೇ ಹೊಲೆಯ
ಪುರಂದರವಿಠಲನ ನೆನೆಯದವ ಹೊಲೆಯ ‖ ೫ ‖

**Note:** Below mentioned lyrics are as per Ref. 3 & 4. These are slightly different and are given separately in green highlights.

ರಾಗ: ಮುಖಾರಿ ತಾಳ: ಮಟ್ಟೆ

ಹೊಲೆಯ ಹೊರಗಹನೆ ಊರೊಳಗಿಲ್ಲವೆ
ಸಲೆ ಶಾಸ್ತ್ರವನು ತಿಳಿದು ಬಲ್ಲವರು ನೋಡಿ ‖ ಪ ‖

ಭಾಳದಲಿ ಭಸಿತ ಭಂಡಾರವಿಡದವ ಹೊಲೆಯ
ಕೇಳಿ ಸಲೆ ಶಾಸ್ತ್ರವನು ತಿಳಿಯದವ ಹೊಲೆಯ
ಆಳಾಗಿ ಅರಸರಿಗೆ ಕೈಮುಗಿಯದವ ಹೊಲೆಯ
ಸೂಳೆಯರ ಕೊಡುವಾತನೇ ಶುದ್ಧ ಹೊಲೆಯ ‖ ೧ ‖

ಇದ್ದ ಧನ ದಾನ – ಧರ್ಮವ ಮಾಡದವ ಹೊಲೆಯ
ಕದ್ದು ತನ್ನೊಡಲ ಹೊರೆವಾತನೇ ಹೊಲೆಯ

ಬದ್ಧವಹ ನಡೆ – ನುಡಿಗಳಿಲ್ಲದಿದ್ದವ ಹೊಲೆಯ
ಮದ್ದಿಕ್ಕಿ ಕೊಲುವವನೆ ಮರಳು ಹೊಲೆಯ ॥ ೨ ॥

ಆಶೆಯನು ತೋರಿ ಭಾಷೆಗೆ ತಪ್ಪುವವ ಹೊಲೆಯ
ಲೇಸು ಉಪಕಾರಗಳನರಿಯದವ ಹೊಲೆಯ
ಮೋಸದಲಿ ಪ್ರಾಣಕ್ಕೆ ಮುನಿಯುವವನೇ ಹೊಲೆಯ
ಹುಸಿ ಮಾತನಾಡುವವನೇ ಸಹಜ ಹೊಲೆಯ ॥ ೩ ॥

ಕೊಂಡ ಋಣವನು ತಿರುಗಿ ಕೊಡಲರಿಯದವ ಹೊಲೆಯ
ಭಂಡ ಮಾತುಳಾಡುವವನೆ ಹೊಲೆಯ
ಗಂಡ – ಹೆಂಡಿರ ನಡುವೆ ಭೇದಗೈವವ ಹೊಲೆಯ
ಹೆಂಡರಿಚ್ಛೆಗೆ ನಡೆವ ಹೇಡಿ ಹೊಲೆಯ ॥ ೪ ॥

ಪರಧನಕೆ ಪರಸತಿಗೆ ಅಳುಪಿದವನೇ ಹೊಲೆಯ
ಗುರು ಹಿರಿಯರನು ಕಂಡು ಎರಗದಿದ್ದವ ಹೊಲೆಯ
ಅರಿತು ಆಚಾರವನು ಮಾಡದಿದ್ದವ ಹೊಲೆಯ
ಪುರಂದರವಿಠಲನನು ನೆನೆಯದವ ಹೊಲೆಯ ॥ ೫ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಹೊಲೆತನ ಎನ್ನುವುದು ಪುರಂದರದಾಸರ ದೃಷ್ಟಿಯಲ್ಲಿ ಅಪೂರ್ಣತೆ, ಅಸಾಮರ್ಥ್ಯ, ಸಣ್ಣತನ ಮುಂತಾದ ದೈಹಿಕ–ಮಾನಸಿಕ ಕೊರತೆಗಳಿಂದ ಹುಟ್ಟಿಬರುವ ವಸ್ತು. ಶೀಲದ್ರೋಹ, ರಾಜದ್ರೋಹ, ಮನೆಮುರುಕತನ, ಆಡಿದ ಮಾತಿಗೆ ತಪ್ಪುವಿಕೆ, ಸುಳ್ಳುಗಾರಿಕೆ ಮುಂತಾದ ದುರ್ಗುಣ ಸಂಪನ್ನರೇ ಪುರಂದರದಾಸರ ದೃಷ್ಟಿಯಲ್ಲಿ 'ಹೊಲೆಯರು'. ಅವರ ಉಗಾಭೋಗವೊಂದು ಇದನ್ನೇ ಸಮರ್ಥಿಸುತ್ತದೆ.

ಹೊಲೆಯ ಬಂದನೆಂದು ಒಳಗೆ ದೇವರ ಮಾಡಿ
ಗಣಗಣ ಗಂಟೆಯ ಬಾರಿಸುವರಯ್ಯಾ
ತನುವಿನ ಕೋಪವು ಹೊಲೆಯಲ್ಲವೆ
ಪರಧನ ಪರಸತಿ ಹೊಲೆಯಲ್ಲವೆ

ಹೊರಗಿದ್ದ ಹೊಲೆಯನ ಒಳಗೆ ಬಚ್ಚಿಟ್ಟರೆ
ಇದಕೇನು ಮದ್ದೋ ಪುರಂದರವಿಠಲ.

**Classification:** Keerthane
**Ankita:** purandara vittala
**Location:** NA
**Category:** Jeevana Sutra,
**Sub-Category:** Holeya, ooru, harikatha, arasa, mane, oota, hendati, dAna, dharma, Ase, mosa, sittu, sullu, huchha, patni, papa, shastra, rokka, kalla, prana, runa, pati, smarane,
**Pravachana:** NA
**Explanation:** NA